**ಮಾನ್ಯ ವಿಧಾನ ಪರಿಷತ್ತು ಸದಸ್ಯರಾದ ಶ್ರೀ. ಕೆ ಪ್ರತಾಪ್ ಸಿಂಹ ನಾಯಕ್ ಇವರ 330ನೇ ನಿಯಮದ ಮೇರೆಗೆ ಸೂಚನೆ ಉತ್ತರಿಸುವ ಬಗ್ಗೆ.**

ಪ್ರಶ್ನೆ:- ರಾಜ್ಯ ಸರ್ಕಾರವು 1996 ರಲ್ಲಿ ಅರ್ಹ ಅರಣ್ಯ ಒತ್ತುವರಿ ಪ್ರಕರಣಗಳನ್ನು ಸಕ್ರಮಗೊಳಿಸಲು ಕೇಂದ್ರ ಸರ್ಕಾರಕ್ಕೆ ಅನುಮತಿ ಕೋರಿ ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಅರ್ಹ ಒತ್ತುವರಿದಾರರ ಹಲವಾರು ಪ್ರಕರಣಗಳು ಕೈಬಿಟ್ಟು ಹೋಗಿವೆ. ಅಲ್ಲದೇ ಅರಣ್ಯ ಇಲಾಖೆಯು ಕಂದಾಯ ಇಲಾಖೆಯೊಂದಿಗೆ ವ್ಯವಸ್ಥಿತವಾಗಿ ಹಾಗೂ ಯೋಜನಾಬದ್ಧವಾಗಿ ಜಂಟಿ ಸರ್ವೆ ಮಾಡಿ ಪರಿಹಾರ ಹುಡುಕದ ಕಾರಣದಿಂದಾಗಿ ಹಾಗೂ ಈ ಹಿಂದೆ ಅರಣ್ಯ ಕಾಯ್ದೆಗಳನ್ವಯ ಮಂಜೂರಾದ ಎಲ್ಲಾ ಅರಣ್ಯ ಭೂಮಿಯನ್ನು "Denotification" ಮಾಡದಿರುವುದರಿಂದ ಇಂದಿಗೂ ಇಂತಹ ಮಂಜೂರಾತಿಗಳು ಕರ್ನಾಟಕ ಅರಣ್ಯ ಇಲಾಖೆಯ ದಾಖಲೆಗಳಲ್ಲಿ "ಅರಣ್ಯ" ಎಂಬುದಾಗಿ ಮುಂದುವರೆಸಿಕೊಂಡು ಬರಲಾಗುತ್ತಿರುವುದರಿಂದ, ಹಲವಾರು ಅರ್ಹ ಅರಣ್ಯ ಒತ್ತುವರಿದಾರರಿಗೆ ಇಂದಿಗೂ ನ್ಯಾಯ ಸಿಗದೇ ಉಂಟಾಗಿರುವ ಗಂಭೀರ ಸಮಸ್ಯೆ ಕುರಿತು ಸದನದಲ್ಲಿ ಪ್ರಸ್ತಾಪಿಸಲು ಬಯಸುತ್ತೇನೆ.

*******

**ಉತ್ತರ:**

1996 ರಲ್ಲಿ ಅರ್ಹ ಅರಣ್ಯ ಒತ್ತುವರಿ ಪ್ರಕರಣಗಳನ್ನು ಸಕ್ರಮಗೊಳಿಸಲು ಕೇಂದ್ರ ಸರ್ಕಾರಕ್ಕೆ ಅನುಮತಿ ಕೋರಿ ಪ್ರಸ್ತಾವನೆಗಳನ್ನು ಸಲ್ಲಿಸುವಾಗ ಅರ್ಹ ಒತ್ತುವರಿದಾರರ ಪ್ರಕರಣಗಳು ಕೈಬಿಟ್ಟು ಹೋಗಿರುವ ಪ್ರಕರಣಗಳು ಸರ್ಕಾರಕ್ಕೆ ವರದಿಯಾಗಿರುವುದಿಲ್ಲ.

ಕೇಂದ್ರ ಸರ್ಕಾರದ ಪರಿಸರ ಮತ್ತು ಅರಣ್ಯ ಸಚಿವಾಲಯ, ನವದೆಹಲಿ ರವರ ಪತ್ರ ಸಂ.: ನಂ.8-50/95-FC, ದಿನಾಂಕ: 15.05.1996 ಹಾಗೂ ರಾಜ್ಯ ಸರ್ಕಾರದ ಆದೇಶ ಸಂಖ್ಯೆ: ಎಫ್‌ಇಇ 5 ಎಫ್‌ಜಿಎಲ್ 90, ಬೆಂಗಳೂರು, ದಿನಾಂಕ:05.05.1997 ರನ್ವಯ ಕೆಲವು ಷರತ್ತುಗಳನ್ನು ವಿಧಿಸಿ ಅರಣ್ಯ ಒತ್ತುವರಿಗಳನ್ನು ಸಕ್ರಮಗೊಳಿಸಲು ಅನುಮತಿ ನೀಡಿರುವುದನ್ನು ಪರಿಗಣಿಸಿ, ಆಯಾ ಜಿಲ್ಲಾಧಿಕಾರಿಗಳು ಅರ್ಹ ಅರಣ್ಯ ಒತ್ತುವರಿದಾರರು ಹಾಗೂ ಅರ್ಹ ವಿಸ್ತೀರ್ಣವನ್ನು ಗುರುತಿಸಿ ಸಂಪೂರ್ಣ ವಿವರದೊಂದಿಗೆ ಸೂಕ್ತ ಪ್ರಸ್ತಾವನೆ ಸಲ್ಲಿಸಲು ಆಯಾ ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ.

ಮಾನ್ಯ ಸರ್ವೋಚ್ಚ ನ್ಯಾಯಾಲಯವು ದಿನಾಂಕ: 13.11.2000 ರ IA No. 2 in WP No. 337/1995, and again reiterated by the Supreme Court on 09.02.2004 in IA No. 16 that "…Pending further orders, no de-reservation of Forest/ Sanctuaries/National Parks shall be effected" ಎಂದು ಆದೇಶಿಸಿರುತ್ತಾರೆ.

ಈ ಆದೇಶದ ಹಿನ್ನೆಲೆಯಲ್ಲಿ ಒತ್ತುವರಿಯಾದ ಅರಣ್ಯ ಪ್ರದೇಶಗಳನ್ನು ಸಕ್ರಮಗೊಳಿಸಲು ಕಾನೂನಾತ್ಮಕವಾಗಿ ಸಲಹೆಯನ್ನು ಪಡೆದು ಸರ್ವೋಚ್ಚ ನ್ಯಾಯಾಲಯದಲ್ಲಿ IA ಸಲ್ಲಿಸಲು ಕ್ರಮವಹಿಸಲಾಗಿದೆ.

**ಸಂಖ್ಯೆ: FEE 17 FGL 2024.**

Bkhandre

**(ಈಶ್ವರ ಬಿ ಖಂಡ್ರೆ)**

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವರು.